ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1519
2. ಸದಸ್ಯರ ಹೆಸರು : ಶ್ರೀ. ಯು.ಬಿ. ವೆಂಕಟೇಶ್
3. ಉತ್ತರಿಸುವ ದಿನಾಂಕ : 10-03-2022
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದಲ್ಲಿ ರಸ್ತೆಗಳ ಅಗಲೀಕರಣಕ್ಕೆ ಮತ್ತು ಇತರೆ ಕಾಮಗಾರಿ ಸಂಬಂಧ ಖಾಸಗಿ ವ್ಯಕ್ತಿಗಳ ಹಾಗೂ ಸ್ಥಳೀಯ ಸಂಸ್ಥೆಗಳ ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ಸಂದರ್ಭಗಳಲ್ಲಿ ಅಂತಹ ಸ್ವತ್ತುಗಳಿಗೆ ಪರಿಹಾರ ನೀಡುವಾಗ ಸರ್ಕಾರವು ಅನುಸರಿಸುತ್ತಿರುವ ಮಾನದಂಡ ಯಾವುವು;	ಬೆಂಗಳೂರು ನಗರದಲ್ಲಿ ರಸ್ತೆಗಳ ಅಗಲೀಕರಣಕ್ಕೆ ಮತ್ತು ಇತರೆ ಕಾಮಗಾರಿ ಸಂಬಂಧ ಖಾಸಗಿ ವ್ಯಕ್ತಿಗಳ ಹಾಗೂ ಸ್ಥಳೀಯ ಸಂಸ್ಥೆಗಳ ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ಸಂದರ್ಭಗಳಲ್ಲಿ ಅಂತಹ ಸ್ವತ್ತುಗಳಿಗೆ ಪರಿಹಾರ ನೀಡುವಾಗ ಈ ಕೆಳಕಂಡ ಕಾಯ್ದೆಗಳನ್ನು ಅನುಸರಿಸಲಾಗುತ್ತಿದೆ:- 1) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಬಿ) ರಂತೆ ಡಿ.ಆರ್.ಸಿ. ನೀಡುವುದು. 2) Fair Compensation and Transparency in Land Acquisition, Rehabilitation and Resettlement Act 2013,
ಆ	ಬೆಂಗಳೂರು ನಗರದಲ್ಲಿ ಈ ರೀತಿ ಸ್ವಾಧೀನಪಡಿಸಿಕೊಂಡು ಪರಿಹಾರ ನೀಡದಿರುವ ಪ್ರಕರಣಗಳ ಸಂಖ್ಯೆಯೆಷ್ಟು; ಪರಿಹಾರ ನೀಡಲು ಬೇಕಾಗುವ ಕಾಲಾವಧಿಯೆಷ್ಟು; ಪರಿಹಾರವನ್ನು ನೀಡಲು ವಿಳಂಬ ನೀತಿಯನ್ನು ಅನುಸರಿಸುವುದಕ್ಕೆ ಕಾರಣಗಳೇನು; (ಸಂಪೂರ್ಣ ವಿವರವನ್ನು ಒದಗಿಸುವುದು)	ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ತಿದ್ದುಪಡಿ ಕಾಯ್ದೆ 2005ರ ಅಡಿಯಲ್ಲಿ ಅಭಿಯಂತರರ ಶಾಖೆಯಿಂದ ಹೊರಡಿಸಲಾದ ಅಧಿಸೂಚನೆಯಲ್ಲಿ ರಸ್ತೆಯನ್ನು ಅಗಲೀಕರಣ ಗೊಳಿಸುವ ಮಾರ್ಗಗಳನ್ನು ಮಾತ್ರ ನಮೂದಿಸಲಾಗುತ್ತಿತ್ತು. ಇದರಿಂದ ಸದರಿ ರಸ್ತೆಗಳಲ್ಲಿ ಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ಮಾಹಿತಿಯಿಲ್ಲದ ಕಾರಣ, ಬಿ.ಬಿ.ಎಂ.ಪಿ.ಯ ಮುಖ್ಯ ಆಯುಕ್ತರ ಕಛೇರಿ ಆದೇಶ ದಿನಾಂಕ: 26-06-2020ರಂತೆ ಕರ್ನಾಟಕ ಪಟ್ಟಣ ಮತ್ತು ನಗರ ಯೋಜನೆ ಕಾಯ್ದೆ, 2005ರ ಕಲಂ 14(ಬಿ)ರಂತೆ ಹೊರಡಿಸಿರುವ ಎಲ್ಲಾ ರಸ್ತೆ ಅಗಲೀಕರಣ ಅಧಿಸೂಚನೆಯಲ್ಲಿ ಟಿ.ಡಿ.ಆರ್ ನೀಡದೇ ಇರುವ ಎಲ್ಲಾ ಪ್ರಸ್ತಾವನೆಗಳಿಗೆ ಕಡ್ಡಾಯವಾಗಿ ಕರ್ನಾಟಕ ಪಟ್ಟಣ ಮತ್ತು ನಗರ ಯೋಜನೆ (Benefit of Development Rights) ನಿಯಮ 2016 ರಂತೆ ಫಾರಂ-1 ಅಧಿಸೂಚನೆ ಹೊರಡಿಸಿ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ. ಈ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ, 2015 ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ (Benefit of Development Rights) ನಿಯಮಗಳು, 2016 ರಂತೆ ಅಭಿಯಂತರರ ಶಾಖೆಯಿಂದ ಅಂದಾಜು 44 ರಸ್ತೆಗಳ ಅಧಿಸೂಚನೆಯನ್ನು ತಯಾರಿಸಿದ್ದು, ಸುಮಾರು 2573 ಸ್ವತ್ತುಗಳು ಸ್ವಾಧೀನಕ್ಕೆ ಒಳಪಟ್ಟಿದ್ದು, ಟಿ.ಡಿ.ಆರ್ ಯೋಜನೆಯಡಿ ಸ್ವಾಧೀನಕ್ಕೆ ಒಳಪಟ್ಟ ಸ್ವತ್ತಿನ ಮಾಲೀಕರು ಡಿ.ಆರ್.ಸಿ. ಪರಿಹಾರ ಪಡೆಯಲು ಅನುಮತಿ ನೀಡಿ, ಫಾರಂ-4 ನಲ್ಲಿ ಒಪ್ಪಿಗೆ ಪತ್ರ (Consent letter) ಸಲ್ಲಿಸಿದಲ್ಲಿ ಮಾತ್ರ ಪರಿಹಾರ ನೀಡಲು ಕ್ರಮವಹಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸ್ವತ್ತಿನ ಮಾಲೀಕರು ಒಪ್ಪಿಗೆ ನೀಡಿದ ನಂತರ ಟಿ.ಡಿ.ಆರ್ ಯೋಜನೆಯಡಿ ಮುಂದಿನ ಕ್ರಮವಹಿಸಬೇಕಾಗಿರುವುದರಿಂದ, ಪರಿಹಾರ ನೀಡುವಲ್ಲಿ ವಿಳಂಬವಾಗುತ್ತಿರುತ್ತದೆ.

...2..

		ಮುಂದುವರೆದು, Karnataka Town and Country Planning (Amendment) Act, 2021ರಂತೆ ಮಾಲೀಕರಿಂದ ಕಂದಾಯ ದಾಖಲೆಗಳನ್ನು ಪಡೆಯಲು ಮತ್ತು ಸಾರ್ವಜನಿಕ ಆಕ್ಷೇಪಣೆ ಮತ್ತು ಸಲಹೆಗಳನ್ನು ಪಡೆಯಲು ಒಂದೇ ಅಧಿಸೂಚನೆಯನ್ನು ಹೊರಡಿಸಬೇಕಾಗಿರುವ ಹಿನ್ನೆಲೆಯಲ್ಲಿ, ನಿಗಧಿತ ನಮೂನೆಗಳಿಗೆ ಸಂಬಂಧಿಸಿದಂತೆ, ಬಿ.ಬಿ.ಎಂ.ಪಿ.ಯು ಸರ್ಕಾರದಿಂದ ಅನುಮೋದನೆ ಕೋರಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.
ಇ	2013 Land Acquisition Act ನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಇದರನ್ವಯ ಎಷ್ಟು ಮಂದಿಗೆ ಪರಿಹಾರ ಅಥವಾ ಟಿ.ಡಿ.ಆರ್. ನೀಡಲಾಗಿದೆ; (ವಿವರವನ್ನು ನೀಡುವುದು)	ಜಾರಿಗೊಳಿಸಲಾಗಿದೆ. ಸದರಿ ಕಾಯ್ದೆಯನ್ವಯ ಒಂದು ಪ್ರಕರಣದಲ್ಲಿ ಪರಿಹಾರವನ್ನು ನೀಡಲಾಗಿದೆ. ಕಾಯ್ದೆಯ 11(1) ಪ್ರಾಥಮಿಕ ಅಧಿಸೂಚನೆಗೆ 2 ಪ್ರಕರಣಗಳು ಪರಿಶೀಲನೆ ಹಂತದಲ್ಲಿರುತ್ತದೆ. ಒಂದು ಪ್ರಕರಣದಲ್ಲಿ ಅವಾರ್ಡ್ ಅನುಮೋದನೆಗೆ ಪ್ರಸ್ತಾವನೆಯನ್ನು ಕಂದಾಯ ಇಲಾಖೆಗೆ ಸಲ್ಲಿಸಲಾಗಿರುತ್ತದೆ. ಈ ಕಾಯ್ದೆ ಅಡಿಯಲ್ಲಿ ಟಿ.ಡಿ.ಆರ್. ನೀಡಲು ಅವಕಾಶವಿರುವುದಿಲ್ಲ.
ಈ	ಇಲ್ಲವಾದಲ್ಲಿ, ಜಾರಿಗೊಳಿಸದಿರಲು ಕಾರಣವೇನು?	ಅನ್ವಯಿಸುವುದಿಲ್ಲ.

ಸಂಖ್ಯೆ: ನಅಇ 52 ಬಿಬಿಎಲ್ 2022(ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ